## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ಹಾವೇರಿ.

## ಪ್ರಕರಣ ಸಂಖ್ಯೆಃ ಸ್ಪೆಷಲ್ ಎಸ್.ವಿ.ಸಿ. 2/2019

**ಪಿರ್ಯಾದಿದಾರರು** – ರಾಜ್ಯದ ಪರವಾಗಿ

ಪ್ರಾಜ್ಞ ವಿಶೇಷ ಸರ್ಕಾರಿ ಅಭಿಯೋಜಕರು,
ಹಾವೇರಿ.

**– ವಿರುದ್ಧ –**

**ಆರೋಪಿ** – ಲೋಕೇಶ ಕೆ.ಪಿ. ತಂದೆ ಪುಟ್ಟೋಬಯ್ಯ ಎಸ್.,

## *:: ದೋಷಾರೋಪಣೆ ::*

ಹಾವೇರಿಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರಾದ ಶ್ರೀಮತಿ ಯಾದವ ವನಮಾಲಾ ಆನಂದರಾವ್, ಬಿ.ಕಾಂ., ಎಲ್‌ಎಲ್.ಬಿ(ಸ್ಪೆಷಲ್); ನಾನು ಈ ಕೆಳಕಂಡ ಆರೋಪಿಯಾದ -

ಲೋಕೇಶ ಕೆ.ಪಿ. ತಂದೆ ಪುಟ್ಟೋಬಯ್ಯ ಎಸ್.,
ವಯಾಃ 41 ವರ್ಷ, ಉಃ ಭೂಮಾಪಕರು, ಬೊಮ್ಮನಹಳ್ಳಿ ಹೋಬಳಿ,
ವಾಸ ಸ್ಥಳಃ ಕೃಷ್ಣಾಪುರ, ಧರ್ಮಪುರ ಪೋ, ಚಿತ್ರದುರ್ಗ ಜಿ.
ಹಾಲಿ ವಾಸಃ ದಾವಣಗೆರೆ.

ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆ,

ಈ ಪ್ರಕರಣದ ಪಿರ್ಯಾದಿ/ಚಾಸಾ-1 ಸಿದ್ದಲಿಂಗಪ್ಪ ಪೂಜಾರ ಇವರ ಮಾವನಾದ ಚಾಸಾ-4/ ದೇವಿಂದ್ರಪ್ಪ ದೇವಗಿರಿ ಇವರು ವರ್ದಿ ಗ್ರಾಮದ ವಾಸಿಯಾಗಿದ್ದು, ಚಾಸಾ-4 ರವರ ತಂದೆಯ ಮರಣದ ನಂತರ ಅವರಿಗೆ ಸಂಬಂಧಿಸಿದ ವರ್ದಿ ಗ್ರಾಮದ ರಿ.ಸ.ನಂ.128/1 ಕ್ಷೇತ್ರ 3 ಎಕರೆ 2 ಗುಂಟೆ ಜಮೀನನ್ನು ಚಾಸಾ-4, ಅವರ ಸಹೋದರ ಮತ್ತು ಸಹೋದರಿಯರು ಸಮನಾಗಿ ಪಾಲು ಮಾಡಿಕೊಳ್ಳಲು ಮಾನ್ಯ ನ್ಯಾಯಾಲಯದಿಂದ ಡಿಕ್ರಿ ಆದೇಶವನ್ನು ಪಡೆದುಕೊಂಡಿದ್ದು, ನಂತರ ಸದರಿ ಆಸ್ತಿಯನ್ನು ಪೋಡಿ ಮಾಡಿ ನಕಾಶೆಯನ್ನು ತಯಾರಿಸಲು ಚಾಸಾ-4 ರವರು ದಿನಾಂಕಃ13/11/2017 ರಂದು ಬೊಮ್ಮನಹಳ್ಳಿ ನಾಡ ಕಛೇರಿಯಲ್ಲಿ ಅರ್ಜಿಯನ್ನು ಸಲ್ಲಿಸಿದ್ದು, ಅದನ್ನು ಮೋಜಣಿ ಮಾಡಲು

ಹಾನಗಲ್ಲ ತಾಲೂಕ ಭೂಮಾಪನ ಇಲಾಖೆಗೆ ಕಳಿಸಿಕೊಟ್ಟಿದ್ದು, ಈ ಪ್ರಕರಣ ನಡೆಯುವ ಸುಮಾರು 3 ತಿಂಗಳ ಹಿಂದೆ ಆರೋಪಿಯಾದ ನೀವು ಚಾಸಾ-4 ರವರ ಜಮೀನಿಗೆ ಬಂದು ನಕಾಶೆ ತಯಾರಿಸಲು ಅಳತೆ ಮಾಡಿಕೊಂಡು ಹೋಗಿದ್ದು, ನಂತರ ಪಿರ್ಯಾದಿ/ಚಾಸಾ-1 ರವರು ಅರ್ಜಿ ನೀಡಿದ ಬಗ್ಗೆ ಹಾಗೂ ನಕಾಶೆ ತಯಾರಿಸಿದ ಬಗ್ಗೆ ನಿಮ್ಮನ್ನು ಭೇಟಿ ಮಾಡಿ ಅನೇಕ ಬಾರಿ ಕೇಳಿದರೂ ಕೊಟ್ಟಿರಲಿಲ್ಲ. ಸುಮಾರು ದಿನದ ನಂತರ ಪಿರ್ಯಾದಿಯು ಪುನಃ ನಿಮ್ಮನ್ನು ಭೇಟಿ ಮಾಡಲು ಹೋದಾಗ ಆರೋಪಿಯಾದ ನೀವು ಪಿರ್ಯಾದಿ/ಚಾಸಾ-1 ರವರಿಗೆ "ನಿಮ್ಮ ಕೆಲಸ ಮಾಡಬೇಕಾದರೆ ನನಗೆ ರೂ.5,000/- ಹಣವನ್ನು ನೀಡಬೇಕು" ಅಂತಾ ಹೇಳಿದ್ದು, ದಿನಾಂಕ:2/6/2018 ರಂದು ಆರೋಪಿಯಾದ ನಿಮಗೆ ಪೋನ್ ಮಾಡಿ ಮಾತನಾಡಿದಾಗಲೂ ಸಹ ನೀವು ಲಂಚದ ಹಣಕ್ಕೆ ಬೇಡಿಕೆ ಇಟ್ಟಿದ್ದು, ಆ ಮೂಲಕ ಆರೋಪಿಯಾದ ನೀವು ಪಿ.ಸಿ. ಕಾಯ್ದೆ-1988 ರ ಕಲಂ.7 ರಡಿಯ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದೀರಿ ಮತ್ತು ಅದು ಈ ನ್ಯಾಯಾಲಯದ ಸಂಜ್ಞೆಯಲ್ಲಿದೆ.

ಕೊನೆಯದಾಗಿ, ದಿನಾಂಕ:5/6/2018 ರಂದು ಬೆಳಿಗ್ಗೆ 9.15 ಘಂಟೆ ಸುಮಾರಿಗೆ ಸಂಗೂರ ಗ್ರಾಮದ ಬಸ್ಸು ನಿಲ್ದಾಣದ ಹತ್ತಿರ ಇರುವ ರಾಘವೇಂದ್ರ ಬೇಕರಿಯ ಸಮೀಪ ಆರೋಪಿಯಾದ ನೀವು ಚಾಸಾ-4 ರವರಿಂದ 5,000/- ರೂಪಾಯಿ ಲಂಚದ ಹಣವನ್ನು ಸ್ವೀಕರಿಸಿ ಲೋಕಾಯುಕ್ತರ ಬಲೆಗೆ ಸಿಕ್ಕಿ ಬಿದ್ದು, ನೀವು ನಿಮ್ಮ ಸರ್ಕಾರಿ ಹುದ್ದೆಯನ್ನು ದುರುಪಯೋಗಪಡಿಸಿಕೊಂಡಿದ್ದು, ಆ ಮೂಲಕ ಆರೋಪಿಯಾದ ನೀವು ಪಿ.ಸಿ. ಕಾಯ್ದೆ -1988 ರ ಕಲಂ.13(1)(ಡಿ) ಸಹ ಕಲಂ.13(2) ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಎಸಗಿದ್ದೀರಿ ಮತ್ತು ಅವು ಈ ನ್ಯಾಯಾಲಯದ ಸಂಜ್ಞೆಯಲ್ಲಿವೆ.

ಈ ಮೇಲೆ ಹೇಳಿದ ದೋಷಾರೋಪಣೆಗಳಿಗಾಗಿ ಈ ನ್ಯಾಯಾಲಯದ ಮುಂದೆ ಅಧಿವಿಚಾರಣೆ ನಡೆಯಲಿದೆ.

**ಹಾವೇರಿ** **(ಯಾದವ ವನಮಾಲಾ ಎ.)**

**ದಿನಾಂಕ: 02/09/2022** **ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**

**ಹಾಗೂ ವಿಶೇಷ ನ್ಯಾಯಾಧೀಶರು, ಹಾವೇರಿ**